ಸಿ ಸಿ 1094/ 2018

ಪಿ ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿಃ 21.06.2023

<u>ಪಾಟೀ ಸವಾಲುಃ- ಶ್ರೀ ಸಿ ವಿ ಪಿ ಆರೋಪಿ ಪರ ವಕೀಲರಿಂದ</u>

ನಾನು ಜೋಗಿಪುರದಲ್ಲಿ ವಾಸವಿದ್ದೇನೆ. ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮತ್ತು ಸಣ್ಣ ಪುಟ್ಟ ಎಳನೀರು ವ್ಯಾಪಾರ ಮಾಡಿಕೊಂಡು ಇದ್ದೇನೆ. ನನಗೆ ಜಮೀನು ಇದೆ. ನನ್ನ ಜಮೀನಿನ ಸರ್ವೆ ನಂಬರ್ 39/6, 28/19, 28/39 ಆಗಿರುತ್ತದೆ. ನನಗೆ ಮತ್ತು ನನ್ನ ಕುಟುಂಬಕ್ಕೆ ಈಗ ಹೇಳಿದಂತೆ ಯಾವುದೇ ಜಮೀನು ಇಲ್ಲವೆಂದರೆ ಸರಿಯಲ್ಲ. ನನಗೆ ಜಮೀನು ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಲು ನನಗೆ ತೊಂದರೆಯಿಲ್ಲ. ನಾನು ತೆಂಗಿನಕಾಯಿ ವ್ಯಾಪಾರದ ದಲ್ಲಾಳಿ ಕೆಲಸವನ್ನು ಮಾಡಿಕೊಂಡಿದ್ದೇನೆ. ನಾನು ಒಂದು ವಾರಕ್ಕೆ 1000-2000 ತೆಂಗಿನಕಾಯಿ ಮಾರಾಟ ಮಾಡುತ್ತೇನೆ. 1 ಎಳನೀರಿಗೆ 2 ರೂಪಾಯಿ ಕಮಿಷನ್ ಸಿಗುತ್ತದೆ. ನಾನು ಯಾವುದೇ ವ್ಯಾಪಾರ ಹಾಗೂ ದಲ್ಲಾಳಿ ಕೆಲಸವನ್ನು ಮಾಡುತ್ತಿಲ್ಲವೆಂದರೆ ಸರಿಯಲ್ಲ.

ನಾನು 1 ನೇ ಮತ್ತು 2 ನೇ ಆರೋಪಿತರಿಗೆ ಇಬ್ಬರಿಗೂ ಒಟ್ಟಿಗೆ 5,50,000/- ರೂಪಾಯಿ ಹಣವನ್ನು ಕೊಟ್ಟಿರುತ್ತೇನೆ. ಆರೋಪಿತರು ಜನವರಿ-2018 ರ ದಿನಾಂಕ 1 ಅಥವಾ 2 ನೇ ತಾರೀಖಿನಂದು ನಾನು ಹಣವನ್ನು ಕೇಳಿರುತ್ತಾರೆ. ನಾನು ಜನವರಿ 2018 ರ ಕೊನೆಯ ವಾರದಲ್ಲಿ ಆರೋಪಿತರಿಗೆ ಹಣವನ್ನು ಕೊಟ್ಟಿದ್ದೇನೆ, ನಿಖರವಾಗಿ ಯಾವ ದಿನಾಂಕದಂದು ಹಣವನ್ನು ನೀಡಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಆರೋಪಿತರು ಕೆನರಾ ಬ್ಯಾಂಕ್ ನ ಜಂಟಿ ಖಾತೆ ಹೊಂದಿರುವ ಚೆಕ್ ನ್ನು ನನಗೆ ನೀಡಿರುತ್ತಾರೆ. ನನಗೆ ಕಾರ್ಪೋರೇಷನ್ ಬ್ಯಾಂಕ್, ಚನ್ನರಾಯಪಟ್ಟಣ ಶಾಖೆಯಲ್ಲಿ ಬ್ಯಾಂಕ್ ಖಾತೆಯಿದೆ, ಸಾಕ್ಷಿ ಮುಂದುವರೆದು ಸದರಿ ಬ್ಯಾಂಕ್ ಈಗ ಯೂನಿಯನ್ ಬ್ಯಾಂಕ್ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಸುಮಾರು 10 ವರ್ಷಗಳಿಂದ ಬ್ಯಾಂಕ್ ವ್ಯವಹಾರವನ್ನು ಮಾಡಿಕೊಂಡಿದ್ದೇನೆ. ನಾನು ನನ್ನ ಎಲ್ಲಾ ವ್ಯವಹಾರಗಳನ್ನು ಬ್ಯಾಂಕ್ ಮೂಲಕ ಮಾಡುವುದಿಲ್ಲ.

ಆರೋಪಿತರಿಗೆ ನೀಡಿದ 5,50,000/- ರೂಪಾಯಿ ಹಣವು ಜಮೀನು ಮಾರಾಟ ಮಾಡಿದ, ಕಾಯಿ ಮಾರಾಟ ಮಾಡಿದ, ಶುಂಠಿ ಮಾರಾಟ ಮಾಡಿದ ಮತ್ತು ಕೊಬ್ಬರಿ ಮಾರಾಟ ಮಾಡಿ ಬಂದ ಹಣವನ್ನು ಸಂಗ್ರಹಿಸಿ ಆರೋಪಿತರಿಗೆ ನೀಡಿರುತ್ತೇನೆ. ನಾನು ಕೊಬ್ಬರಿಯನ್ನು ಎ ಪಿ ಎಂ ಸಿ ಮಾರುಕಟ್ಟೆಗೆ ಮಾರಾಟ ಮಾಡಿರುತ್ತೇನೆ, ಯಾವ ದಿನಾಂಕದಂದು ಮಾರಾಟ ಮಾಡಿರುತ್ತೇನೆ ಎಂದು ನನಗೆ ನಿಖರವಾಗಿ ನೆನಪಿಲ್ಲ. ಶುಂಠಿಯನ್ನು 2018 ರಲ್ಲಿ ಮಾರಾಟ ಮಾಡಿರುತ್ತೇನೆ, ಯಾವ ದಿನಾಂಕದಂದು ಮಾರಾಟ ಮಾಡಿರುತ್ತೇನೆ ಎಂದು ನನಗೆ ನಿಖರವಾಗಿ

ನೆನಪಿಲ್ಲ. ಕಾಯಿಯನ್ನು ಯಾವ ದಿನಾಂಕದಂದು ಮಾರಾಟ ಮಾಡಿರುತ್ತೇನೆ ಎಂದು ನನಗೆ ನಿಖರವಾಗಿ ನೆನಪಿಲ್ಲ. ನಾನು 2018-19 ರಲ್ಲಿ ನಾನು ಕ್ರಯಕ್ಕೆ ತೆಗೆದುಕೊಂಡ ಜಮೀನನ್ನು ಮಾಡಿರುತ್ತೇನೆ, ಯಾರಿಗೆ ಮಾರಾಟ ಮಾಡಿದ್ದೇನೆ ಎಂದು ಹೆಸರು ನಿಖರವಾಗಿ ನೆನಪಿಲ್ಲ. ಅದರ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಸರಿಯಾಗಿ ನೆನಪಿಲ್ಲ. ಸದರಿ ಜಮೀನನ್ನು ಎಷ್ಟು ಮೊತ್ತಕ್ಕೆ ಮಾರಾಟ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ನಾನು ಆಸ್ತಿ ಮಾರಾಟ ಮಾಡಿ ಹಣ ಬಂದಿರುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಮಾರಾಟ ಮಾಡಿದ ಆಸ್ತಿಗೆ ಸಂಬಂಧಿಸಿದಂತೆ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆಯಿಲ್ಲ .

ನಾನು ಸುಮಾರು 20,000-30,000/- ರೂಪಾಯಿಗಳನ್ನು 2017 ನೇ ಸಾಲಿನಲ್ಲಿ ಕೃಷಿ ಸಾಲವಾಗಿ ಪಡೆದುಕೊಂಡಿರುತ್ತೇನೆ. ಸದರಿ ಸಾಲವನ್ನು ನಾನು ಈಗ ಪಾವತಿ ಮಾಡುತ್ತಾ ಇದ್ದೇನೆ. ನನಗೆ ಆರೋಪಿತರಿಗೆ ಹಣವನ್ನು ನೀಡುವಷ್ಟು ಆರ್ಥಿಕ ಸಾಮಾರ್ಥ್ಯ ಇಲ್ಲವೆಂದರೆ ಸರಿಯಲ್ಲ.

ನಿ ಪಿ 1 ನ್ನು ಆರೋಪಿತರು ನನಗೆ ದಿನಾಂಕ 05.07.2018 ರಂದು ನೀಡಿರುತ್ತಾರೆ. ಆರೋಪಿತರು ನನಗೆ ದಿನಾಂಕ 05.07.2018 ರಂದು ಚೆಕ್ ನೀಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿ ಪಿ 1 ನ್ನು ಆರೋಪಿತರು ಬರೆದಿರುತ್ತಾರೆ, ಸಾಕ್ಷಿ ಮುಂದುವರೆದು ಚೆಕ್ ನ ಮೇಲಿನ ಬರವಣಿಗೆಯನ್ನು ನಿಖರವಾಗಿ ಯಾರು ಬರೆದಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ನಿ ಪಿ 1 ರಲ್ಲಿರುವ ಬರವಣಿಗೆಗಳು ಮತ್ತು ಸಹಿಯ ಶಾಹಿಗಳು ಬೇರೆ ಬೇರೆ ಇರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಬರವಣಿಗೆಗಳು ಮತ್ತು ಸಹಿಯ ಶಾಹಿಗಳು ಬೇರೆ ಬೇರೆ ಇರುತ್ತದೆ ಎಂಬ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಮನೆಯನ್ನು ಖರೀದಿಸುವ ಉದ್ದೇಶಕ್ಕಾಗಿ ನನ್ನ ಬಳಿ ಆರೋಪಿತರು ಸಾಲವನ್ನು ಕೇಳಿರುತ್ತಾರೆ. ಸದರಿ ವಿಷಯವಾಗಿ ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ. ಆರೋಪಿತರು ಮನೆ ಖರೀದಿಸುವ ಉದ್ದೇಶಕ್ಕಾಗಿ ಸಾಲ ಪಡೆದಿರುತ್ತಾರೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರಿಗೆ ನನ್ನಿಂದ ಸಾಲವನ್ನು ಪಡೆಯುವ ಯಾವುದೇ ದರದು ಇರಲಿಲ್ಲವೆಂದರೆ ಸರಿಯಲ್ಲ. ನಾನು ಹಣ ನೀಡುವ ಪೂರ್ವದಲ್ಲಿ ಆರೋಪಿಯ ಆರ್ಥಿಕ ಸ್ಥಿತಿ ಗತಿಯ ಬಗ್ಗೆ ತಿಳಿದುಕೊಂಡಿದ್ದೆನು. 5,50,000/- ರೂಪಾಯಿಗಳನ್ನು ಸಾಲವಾಗಿ ನೀಡಬೇಕಾದರೆ ಆರೋಪಿತರಿಗೆ ಸಾಲವನ್ನು ಮರುಪಾವತಿ ಮಾಡುವ ಆರ್ಥಿಕ ಚೈತನ್ಯ ಇದೆಯೇ ಇಲ್ಲವೇ ಎನ್ನುವುದನ್ನು ಪರೀಕ್ಷಿಸಿ ಸಾಲವನ್ನು ನೀಡುತ್ತಾರೆ ಎಂದರೆ ಸರಿ. ಆರೋಪಿತರಿಗೆ ಹಣವನ್ನು ಮರುಪಾವತಿಸುವ ಆರ್ಥಿಕ ಚೈತನ್ಯ ಇಲ್ಲ ಎಂಬ ವಿಚಾರ ಗೊತ್ತಿದ್ದರೂ ಸಹ ಹಣವನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಆರೋಪಿತರು ಮೋಸ ಮಾಡುವುದಿಲ್ಲ ಹಣವನ್ನು ಮರುಪಾವತಿಸುತ್ತಾರೆ ಎಂಬ ಭರವಸೆಯ ಮೇಲೆ ಹಣವನ್ನು ನೀಡಿರುತ್ತೇನೆ ಎನ್ನುತ್ತಾರೆ.

ಸಿ ಸಿ 1094/ 2018

ಪಿ ಡಬ್ಲ್ಯೂ-1

ಆರೋಪಿತರಿಗೆ ಯಾವ ದಿನಾಂಕದಂದು ನೋಟೀಸ್ ನೀಡಿರುತ್ತೇನೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ನಾನು ನೀಡಿದ ನೋಟೀಸ್ ಗೆ ಆರೋಪಿತರು ಮರುಉತ್ತರ ಕೊಟ್ಟಿದ್ದರು ಎಂದರೆ ಸರಿ. ನಿ ಪಿ 1 ಆರೋಪಿತರ ಜಂಟಿ ಖಾತೆಯ ಚೆಕ್ ಆಗಿರುತ್ತದೆ. ನಿ ಪಿ 1 ಆರೋಪಿತರ ಜಂಟಿ ಖಾತೆಯ ಚೆಕ್ ಆಗಿರುತ್ತದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಿ ಪಿ 1 ರ ಚೆಕ್ 1 ನೇ ಆರೋಪಿಗೆ ಸೇರಿದ ಚೆಕ್ ಆಗಿರುತ್ತದೆ ಎಂದರೆ ಗೊತ್ತಿಲ್ಲ. 1 ನೇ ಆರೋಪಿ ಬೋರಮ್ಮ ಈಗ ತೀರಿಕೊಂಡಿರುತ್ತಾರೆ. ನಾನು ಮತ್ತು ಆರೋಪಿತರು ಒಂದೇ ಊರಿನವರು ಮತ್ತು ಸಂಬಂಧಿಕರು ಎಂದರೆ ಸರಿ. ಆರೋಪಿತರು ಇಟ್ಟುಕೊಂಡಿದ್ದ ಚಿಲ್ಲರೆ ಅಂಗಡಿ ಮತ್ತು ಕೋಳಿ ಅಂಗಡಿಗೆ ನಾನು ಮೊದಲು ಹೋಗುತ್ತಿದ್ದೆ. ಆರೋಪಿತರು ಮತ್ತು ನಮ್ಮ ನಡುವೆ ಮೊದಲು ಒಡನಾಟಯಿತ್ತು. ಆರೋಪಿತರ ಅಂಗಡಿಯಲ್ಲಿ ಇಟ್ಟಿದ್ದ ಚೆಕ್ ನ್ನು ನಾನು ಕಳವು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ 1 ರಲ್ಲಿರುವ ಸಹಿ ಆರೋಪಿತರದ್ದಲ್ಲ ಎಂದರೆ ಸರಿಯಲ್ಲ. ಆರೋಪಿತರಿಂದ ಅಕ್ರಮವಾಗಿ ಹಣವನ್ನು ಪಡೆಯುವ ಉದ್ದೇಶದಿಂದ ನಿ ಪಿ 1 ನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ನಾನು ಯಾವುದೇ ಸಾಲ ಕೊಡದಿದ್ದರೂ ಸಹ ಆರೋಪಿತರಿಂದ ಅಕ್ರಮವಾಗಿ ಲಾಭ ಪಡೆಯುವ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದೆದೇನೆಂದರೆ ಸರಿಯಲ್ಲ. ನನ್ನ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ಬ್ಯಾಂಕ್ ಖಾತಾ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆಯಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ನಾನು ಬಿ ಪಿ ಎಲ್ ಕಾರ್ಡ್ ಹೊಂದಿರುತ್ತೇನೆ. ಬಿ ಪಿ ಎಲ್ ಕಾರ್ಡ್ ನ್ನು ಆರ್ಥಿಕ ರೇಖೆಗಿಂತ ಕಡಿಮೆ ಇರುವವರಿಗೆ ನೀಡುತ್ತಾರೆ ಎಂದರೆ ಸಾಕ್ಷಿಯು ಬಿ ಪಿ ಎಲ್ ಕಾರ್ಡ್ ನ್ನು ಹೊಂದಿದ ಮಾತ್ರಕ್ಕೆ ಆರ್ಥಿಕವಾಗಿ ಸಾಮರ್ಥ್ಯವನ್ನು ಹೊಂದಿಲ್ಲ ಎಂದು ಅರ್ಥವಲ್ಲ ಎಂದು ನುಡಿಯುತ್ತಾರೆ. ನಾನು ಬಿ ಪಿ ಎಲ್ ಕಾರ್ಡ್ ನ್ನು ಹೊಂದಲು ಅರ್ಹನಿರುವುದರಿಂದ ನನಗೆ ಬಿ ಪಿ ಎಲ್ ಕಾರ್ಡ್ ನೀಡಿರುತ್ತಾರೆ. 2 ನೇ ಆರೋಪಿಗೂ ಮತ್ತು ನಿ ಪಿ 1 ರ ಚೆಕ್ ಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ .

**(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಸ.ಇ.ಎ.ಒ.,

ಸಹಿ/-

3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.